

ತಮ್ಮ ಕಲ್ಪನೆಯ ಬಣ್ಣಗಳನ್ನು ದಾಸವಾಳ ಹೂವಿನಲ್ಲಿ ಒಡಮೂಡಿಸುವ ಪುಷ್ಪಾ ಸುರೇಶ್ ಅವರು ಇದುವರೆಗೂ ಸಾವಿರಾರು ದಾಸವಾಳ ತಳಿಗಳನ್ನು ಸೃಷ್ಟಿಸಿದ್ದಾರೆ. ಮಲೆನಾಡಿನ ಹಸುರಿನ ನಂಟು ಅವರೊಳಗಿನ ಹೂ ಕಲೆಗೆ ಪ್ರೇರಣೆ. ಈಚೆಗೆ ಅವರ 'ಸೇಕ್ರೆಡ್ ಫೈರ್' ದಾಸವಾಳ, ಅಂತರರಾಷ್ಟ್ರೀಯ ಮನ್ನಣೆ ಪಡೆದುಕೊಂಡಿದೆ.

■ ಸುಮಲತಾ ಎನ್

# ದಾಸವಾಳಕ್ಕೆ ಪುಷ್ಪಾ ಸ್ಪರ್ಶ

ಹಸುರೇ ಮೈದುಂಬಿಕೊಂಡ ಮಲೆನಾಡಿನ ಸಾಗರದಲ್ಲಿ ಹುಟ್ಟಿ ಬೆಳೆದ ಪುಷ್ಪಾ ಸುರೇಶ್ ಅವರಿಗೆ ಗಿಡ ಮರಗಳೆಂದರೆ ಹೆಚ್ಚೇ ಪ್ರೀತಿ. ಮದುವೆ ನಂತರ ಬೆಂಗಳೂರಿಗೆ ಬಂದ ಅವರಿಗೆ ಗಿಡಗಳೇ ಒಡನಾಡಿಗಳೂ ಆದವು. ಅಜ್ಜಿಯ ಕೈಯಲ್ಲಿ ಅರಳುತ್ತಿದ್ದ ಹೂ ಗಿಡಗಳ ಚೆಲುವನ್ನು ಕಂಡುಬೆಳೆದಿದ್ದ ಅವರಲ್ಲಿ ಸಹಜವಾಗಿಯೇ ಹೂಗಳೆಂದರೆ ಆಕರ್ಷಣೆ. ಅದರಲ್ಲೂ, ಸುವಾಸನೆಯಿಲ್ಲದಿದ್ದರೂ ಅಂಗೈಯಗಲ ಅರಳಿ ನಗುವ ದಾಸವಾಳವೆಂದರೆ ತೀರದ ವ್ಯಾಮೋಹ.

ದಾಸವಾಳದ ಬಗೆಗಿನ ಅವರ ಈ ಆಕರ್ಷಣೆ ದೇಶ ವಿದೇಶಗಳನ್ನೂ ಮುಟ್ಟಿದೆ. ದಾಸವಾಳಗಳಿಗೆ ಬಣ್ಣದಿಂದಲೇ ಜೀವ ತುಂಬುವ ಅವರ ಕಲೆ ನೋಡುಗರ ಕಣ್ಣರಳುವಂತೆ ಮಾಡುತ್ತಿವೆ.

ಆಗಿನ ಕಾಲಕ್ಕೆ ಅಜ್ಜಿ ಕಸಿ ಮಾಡಿ ಬೆಳೆಸುತ್ತಿದ್ದ ಭಿನ್ನ ಬಣ್ಣದ ದಾಸವಾಳಗಳನ್ನು ಬೆರಗಿನಿಂದ ನೋಡುತ್ತಿದ್ದ ಪುಷ್ಪಾ ಅವರು, ಬೆಂಗಳೂರಿಗೆ ಬಂದ ನಂತರ, ಇದ್ದ ಜಾಗದಲ್ಲಿಯೇ ಕೆಲವು ಗಿಡಗಳನ್ನು ಬೆಳೆಸುತ್ತಿದ್ದರು. ಮನೆ ಕಟ್ಟಿದ ನಂತರ ತಮ್ಮಾಸೆಯ ಪುಟ್ಟ ತೋಟವನ್ನೂ ಮಾಡಿಕೊಂಡರು. ಅದರಲ್ಲಿ ಥರಾವರಿ ದಾಸವಾಳಗಳನ್ನು ನೆಟ್ಟು ಕಣ್ತುಂಬಿಕೊಂಡರು. ಹೀಗೆ ಇಂಟರ್‌ನೆಟ್‌ನಲ್ಲಿ ಸಿಕ್ಕ ಮಾಹಿತಿಯೊಂದು ಅವರ ಮುಂದೆ ದಾಸವಾಳದ ಹೊಸ ಲೋಕವನ್ನೇ ತೆರೆದಿಟ್ಟಿತ್ತು.

ದಾಸವಾಳ ಬೀಜ ಬಿಡುತ್ತದೆ ಎಂಬೊಂದು ಮಾಹಿತಿ ಹಲವು ಸಾಧ್ಯತೆಗಳನ್ನು ಕಣ್ಣಮುಂದೆ ತಂದಿತ್ತು. ಬೀಜಗಳನ್ನು ಸೃಷ್ಟಿಸಲು ದಾಸವಾಳದ ಪರಾಗಸ್ಪರ್ಶಕ್ಕೆ ಮುಂದಾದರು. ಅದು ಫಲ ನೀಡಿತು ಕೂಡ. ಅವರ ಮನೆಯಂಗಳದ ದಾಸವಾಳ ಗಿಡವೂ ಬೀಜ ಸೃಷ್ಟಿಸಿದ್ದು ಬೆರಗಿನೊಂದಿಗೆ ಹೊಸ ಕಲ್ಪನೆಯನ್ನೂ ಹುಟ್ಟುಹಾಕಿತ್ತು.

ದಿನಗಳೆದಂತೆ ಹೂವಿನ ಬಗೆಗಿನ ಪುಷ್ಪಾ ಅವರ ತಿಳಿವಳಿಕೆಯೂ ಹಿಗ್ಗಿತ್ತು. 'ಯಾಹೂ' ಗುಂಪಿನ ಮೂಲಕ ಪ್ರಪಂಚದ ಮೂಲೆಮೂಲೆಯಲ್ಲಿನ ದಾಸವಾಳಪ್ರಿಯರ ಪರಿಚಯವಾಯಿತು. ದಾಸವಾಳ ಹೂಗಳಿಗೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ಸಂಸ್ಥೆಗಳೂ ಇರುವುದು ಅಚ್ಚರಿ ತಂದಿತ್ತು. 'ಇಂಟರ್‌ನ್ಯಾಷನಲ್ ಹೈಬಿಸ್ಕಸ್ ಸೊಸೈಟಿ' ವೆಬ್‌ತಾಣ ದಾಸವಾಳದ ಹುಟ್ಟು, ಬೆಳವಣಿಗೆ, ಹೈಬ್ರಿಡ್‌ಗಳು, ಪರಾಗಸ್ಪರ್ಶ ನಡೆಸುವ ಕ್ರಿಯೆ, ಬೀಜದಿಂದ ಬೆಳೆಸುವ ಬಗೆಯಿಂದ ಹಿಡಿದು ಅದನ್ನು ಸಂಸ್ಥೆಯಲ್ಲಿ ನೋಂದಣಿ ಮಾಡುವವರೆಗೂ ಸಮಗ್ರ ಮಾಹಿತಿ ನೀಡಿತ್ತು. ಅಲ್ಲಿನ ದಾಸವಾಳದ ಪ್ರದರ್ಶನಗಳು ಇವರ ಆಲೋಚನೆಯ ವ್ಯಾಪ್ತಿಯನ್ನು ಹಿರಿದಾಗಿಸಿತ್ತು.

ಕಣ್ಣುಕೋರೈಸುವ ಬಣ್ಣಗಳ ದಾಸವಾಳಗಳನ್ನು ಕಂಡ ನಂತರ, ಕಾಣುವ ಪ್ರತಿ ವಸ್ತುವಲ್ಲೂ ಇವರ ಕಣ್ಣುಗಳು ಬಣ್ಣವನ್ನೇ ಹುಡುಕಲು ಆರಂಭಿಸಿದ್ದವು. ದಾಸವಾಳ ಬೀಜದಿಂದ ಸಸಿ ಬೆಳೆಸುವ ಕಲೆ ಕರಗತವಾದ ಮೇಲೆ ಅದರಲ್ಲಿ ಬಣ್ಣಗಳನ್ನು ತುಂಬುವ ಕೆಲಸಕ್ಕೆ ಮುಂದಾದರು. ಪ್ರಪಂಚದ ಬೇರೆ ಬೇರೆ ದೇಶದ ಹೈಬ್ರಿಡೈಜರ್‌ಗಳ ಪ್ರೋತ್ಸಾಹ, ದಾಸವಾಳದ ಇವರ ಪ್ರಯೋಗಗಳನ್ನು ಇನ್ನಷ್ಟು ತಿದ್ದಿತೀಡಿತ್ತು. ಹೊಸ ಹೊಸ ದಾಸವಾಳ

